ಊಹಿಸಿಕೊಂಡೇ ಒಳಗೆ ನೋಡಿದರೆ ತಂಗಳು ಕೋಳಿಸಾರಿದ್ದ ಮಡಕೆ ಮೂರು ಹೋಳಾಗಿ ಬಿದ್ದಿತ್ತು. ಅಚ್ಚುಕಟ್ಟಾಗಿ ತೊಳೆದಂತಿದ್ದ, ಅವುಗಳಲ್ಲಿ ಸಾರಿದ್ದ ಗುರುತು ಕೂಡಾ ಇರಲಿಲ್ಲ. ಮುದ್ದೆ ಮಡಕೆಯೊಳಗೆ ಮುಖವಿಟ್ಟಿದ್ದ ಜೋಯಿಸರ ನಾಯಿ ಮಡಕೆಯೊಳಗೇ ಕಚಕ್ ಕಚಕ್ ಎನ್ನುತ್ತ ಸಶಬ್ದವಾಗಿ ಮುದ್ದೆ ಕಬಳಿಸುತ್ತಿತ್ತು. ಕನಲಿ ಕಂಡಾಮಂಡಲವಾದ ಸಿದ್ರಾಮಕ್ಕನ ಕೈಗೆ ಸಿಕ್ಕಿದ್ದು ಬಾಗಿಲ ಹಿಂದಿದ್ದ ಒನಕೆಮಂಡಿ! ಏನೋ ನೆರಳು ಬಿದ್ದಂತಾಗಿ, ನಾಯಿ ಕತ್ತೆತ್ತಿ ನೋಡಿದರೆ ಒನಕೆ ಓಬವ್ವನ ಪ್ರತ್ಯಕ್ಷಾವತಾರವಾಗಿರುವ ಸಿದ್ರಾಮಕ್ಕ! ತನ್ನ ಒಡೆಯ ಜೋಯಿಸರು ಹೇಳುತ್ತಿದ್ದ ಜನ್ಮ ಜನ್ಮಾಂತರಗಳಿಂದ ಗುಡ್ಡೆ ಹಾಕಿಕೊಂಡು ಬಂದಿದ್ದ ಪುಣ್ಯಗಳ್ಯಾವುವೂ ತನ್ನ ರಕ್ಷಣೆಗೆ ಬರಲಾರವೆನ್ನಿಸಿ ನಾಯಿ ಕುತ್ತಿಗೆಗೆ ಬಂದಿದ್ದ ಪ್ರಾಣವನ್ನು ಗಂಟಲಿನಲ್ಲಿದ್ದ ಮುದ್ದೆಯೊಡನೆ ಹಿಂದಕ್ಕೆ ತಳ್ಳಿ ಸಿದ್ರಾಮಕ್ಕನ ಮೋರೆಯನ್ನೇ ದೈನೇಸಿಯಾಗಿ ನೋಡಿತು. ಮಾಡಿದ್ದೆಲ್ಲ ಮಾಡಿ ಈಗ ದೈನೇಸಿಯಿಂದ ನೋಡುತ್ತಿರುವ ನಾಯಿಯ ಕಕ್ಕುಲಾತಿ ಸಿದ್ರಾಮಕ್ಕನ ಕೋಪವನ್ನು ಇಮ್ಮಡಿಯಾಗಿಸಿತು. ಕೈಯ್ಯಲ್ಲಿದ್ದ ಒನಕೆ ಅನಾಮತ್ತು ಮೇಲೆದ್ದ ದೃಶ್ಯವನ್ನು ಕಂಡ ನಾಯಿ ಕೊನೆಯ ಪ್ರಯತ್ನವೆಂಬಂತೆ ಸಿದ್ರಾಮಕ್ಕನ ಕಡೆಗೇ ನುಗ್ಗಿತು. ತನ್ನ ಲೆಕ್ಕಾಚಾರದಂತೆ ಅದು ಸಿದ್ರಾಮಕ್ಕನ ಕಾಲುಸಂದಿಯಲ್ಲಿ ತೂರಿ ನಡುಮನೆಗೆ ಬಂದರೂ ಆಕೆ ಗುರಿತಪ್ಪದೇ ಹೇರಿದ ಒಂದೇ ಒಂದು ಏಟಿಗೆ ಅದರ ಸಣ್ಣಕರುಳು ಮತ್ತು ದೊಡ್ಡ ಕರುಳಿನಲ್ಲಿದ್ದ ನಿನ್ನೆ ದಿನದ ಉಳಿಕೆಯೆಲ್ಲವೂ ಕ್ಷಣಾರ್ಧದಲ್ಲಿ ಛಿಲ್ಲೆಂದು ರಂಗೋಲಿಯಿಟ್ಟಂತೆ ವಿವಿಧ ರೂಪ ಆಕಾರಗಳನ್ನು ಪಡೆದುಕೊಂಡು ನಡುಮನೆ ತುಂಬಾ ಹಾರಿತು. ಸಿದ್ರಾಮಕ್ಕನ ಎರಡನೆಯ ಏಟನ್ನು ತಪ್ಪಿಸಿಕೊಳ್ಳಲು ತನ್ನ ಚಾಲಾಕನ್ನು ಪ್ರದರ್ಶಿಸಹೋದ ನಾಯಿಯು ಆ ವಿವಿಧ ರೂಪಗಳನ್ನು ತುಳಿದು ಕೆಂಚಕ್ಕನ ರಂಗೋಲಿಯ ಜೊತೆ ಏಕವಾಗಿಸಿತು. ಆಗ ತಾನೆ ಕಲಾತ್ಮಕವಾಗಿ ಅರಳಿದ್ದ ರಂಗೋಲಿಗಳ ನಡುವೆ ಹಾರುವರ ಕೇರಿಯ ಈ ನಾಯಿ ಇಟ್ಟ ರಾಶಿ ರಾಶಿ ತೊಪ್ಪೆಗಳನ್ನು ಮತ್ತೆ ಮತ್ತೆ ತುಳಿದು ಸಿದ್ರಾಮಕ್ಕನನ್ನು ದಿಗ್ಭ್ರಾಂತಳನ್ನಾಗಿಯೂ ಅಸಹಾಯಕಳನ್ನಾಗಿಯೂ ಮಾಡಿತು. ಇಂತಹ ಒಂದು ಸಂದರ್ಭಕ್ಕಾಗಿಯೇ ಕಾಯುತ್ತಿದ್ದ ಅದು ಸಿದ್ರಾಮಕ್ಕನ ಕಾಲು ಸಂದಿಯ ನಡುವೆಯೇ ಹರ ಹರ ಮಹಾದೇವ ಎನ್ನುತ್ತ ನುಗ್ಗಿ ಹೊರಟು ಹೋಯಿತು.

ಕೆಲವೇ ಕ್ಷಣಗಳ ಹಿಂದೆ ಮನೆಯ ಒಳಗು ಮತ್ತು ಹೊರಗು ಎರಡನ್ನೂ ಅಂದಗೊಳಿಸಿ ಒಂದಷ್ಟು ಸಾರ್ಥಕತೆಯನ್ನು ಅನುಭವಿಸಿದ್ದ ಸಿದ್ರಾಮಕ್ಕ ತನ್ನ ಈ ಅವಸ್ಥೆಗೆ ಯಾರನ್ನು ಬೈಯಲೂ ಸಾಧ್ಯವಾಗದೆ, ತನ್ನ ಮನೆಯ ಅಂಗಳವನ್ನು ನೋಡಲು ಮನಸ್ಸೊಪ್ಪದೆ ಮತ್ಯಾವುದೋ ಕಡೆಗೆ ಮುಖ ತಿರುಗಿಸಿಕೊಂಡು ಕಣ್ಣುತುಂಬ ನೀರ ತುಂಬಿಕೊಂಡಳು. ಮೂಲೆಯಲ್ಲಿದ್ದ ಕಸಬರಿಕೆ ಕಣ್ಣೀರಿನ ನಡುವೆ ಅಸ್ಪಷ್ಟವಾಗಿ ಕಾಣಿಸಿತು.


## ಎಸ್. ನಟರಾಜ ಬೂದಾಳು

ನಿವೃತ್ತ ಅಧ್ಯಾಪಕ ನಟರಾಜ ಬೂದಾಳು ಕನ್ನಡದ ಪ್ರಮುಖ ವಿಮರ್ಶಕರು, ಸಂಸ್ಕೃತಿ ಚಿಂತಕರು; ಕವಿ, ಕತೆಗಾರರೂ ಕೂಡ. 'ನಾಗಾರ್ಜುನನ ಮೂಲಮಾಧ್ಯಮಕಕಾರಿಕಾ', 'ನಾಗಾರ್ಜುನ – ಅಲ್ಲಮ', 'ಸರಹಪಾದ', 'ಪ್ರತ್ಯೇಕ ಬುದ್ಧ ಅಲ್ಲಮಪ್ರಭು', 'ಕನ್ನಡ ಕಾವ್ಯಮೀಮಾಂಸೆ' ಅವರ ಪ್ರಮುಖ ಸಂಶೋಧನೆಯ ಪುಸ್ತಕಗಳಾಗಿವೆ. 'ಕಪ್ಪುಹುಡುಗನ ಬೆಳಗು', 'ಸೂಜಿಗಲ್ಲು ಹುಡುಗಿ' ಅವರ ಕವನ ಸಂಗ್ರಹಗಳಾದರೆ, 'ಹಿಂದಣ ಹೆಜ್ಜೆಯನರಿತಲ್ಲದೆ' ಅವರ ವಿಮರ್ಶೆಯ ಪುಸ್ತಕವಾಗಿದೆ. ಬೂದಾಳು, ಪ್ರಸ್ತುತ ತುಮಕೂರಿನಲ್ಲಿ ನೆಲೆಸಿದ್ದಾರೆ.